ಎನ್. ಜಗನ್ನಾಥ ಪ್ರಕಾಶ್

# ಹುಟ್ಟು ಕಲಾವಿದೆ **ಲಕ್ಷ್ಮೀಬಾಯಿ ಏಣಗಿ**



ರಂಗಭೂಮಿಯ ವಾತಾವರಣದಲ್ಲಿ ಹುಟ್ಟಿ ಬೆಳೆದು ರಂಗ ದಿಗ್ಗಜರನ್ನೆ ಲಗ್ನವಾಗಿ ನಾಟಕ ರಂಗದಲ್ಲಿ ಅವಿಸ್ಮರಣೀಯ ಸಾಧನೆ ಮಾಡಿದ ಕಲಾವಿದೆ ಲಕ್ಷ್ಮೀಬಾಯಿ ಏಣಗಿ.

ಪ್ರಸಿದ್ಧ ಗುಬ್ಬಿ ಕಂಪೆನಿಯಲ್ಲಿ ಮ್ಯಾನೇಜರ್ ಆಗಿದ್ದ ವಿರೂಪಾಕ್ಷಪ್ಪ–ವೀರಮ್ಮ ದಂಪತಿಯ ಪುತ್ರಿ ಲಕ್ಷ್ಮೀಬಾಯಿ ಕಣ್ಣುಬಿಟ್ಟಿದ್ದೇ ನಾಟಕ ಸಂಸ್ಥೆಯಲ್ಲಿ. ಗುಬ್ಬಿ ಕಂಪೆನಿ ಮೊಕ್ಕಾಂ ಹೂಡುತ್ತಿದ್ದ ಸ್ಥಳಗಳಲ್ಲಿ ಬಾಲ್ಯ ಕಳೆದ ಲಕ್ಷ್ಮೀಬಾಯಿ ಶಾಲೆಗೆ ಹೋಗಿ ಕಲಿತಿದ್ದು ಅಲ್ಪ ಸ್ವಲ್ಪ.

ಕಲಾವಿದರು, ಮ್ಯಾನೇಜರು, ಸಂಗೀತಗಾರರು ಕಂಪೆನಿಯಿಂದ ಇನ್ನೊಂದು ಕಂಪೆನಿಗೆ ವಲಸೆ ಹೋಗುವುದು ಸಾಮಾನ್ಯವಾಗಿದ್ದ ಆ ದಿನಗಳಲ್ಲಿ ಗುಬ್ಬಿ ಕಂಪೆನಿ ಬಿಟ್ಟ ವಿರೂಪಾಕ್ಷಪ್ಪ ಸೇರಿದ್ದು ಅಥಣಿ ಭೀಮರಾಯರ 'ಭಾಗ್ಯೋದಯ' ಸಂಸ್ಥೆಗೆ. ಇದೇ ಕಂಪೆನಿಯ ನಾಟಕವೊಂದಕ್ಕೆ ಆಕಸ್ಮಿಕವಾಗಿ ಸೇರಿಕೊಂಡ ಲಕ್ಷ್ಮೀಬಾಯಿ ಮುಂದೆ ಬಣ್ಣದ ಬದುಕಿಗೆ ತಮ್ಮನ್ನು ಅರ್ಪಿಸಿಕೊಂಡಿದ್ದು ಈಗ ಇತಿಹಾಸ.

ಭಾಗ್ಯೋದಯ ಸಂಸ್ಥೆಯಲ್ಲಿ 'ರಾಜಾ ಭರ್ತೃಹರಿ' ನಾಟಕದ ರಾಜಕುವರನ ಪಾತ್ರಕ್ಕೆ ಪುಟ್ಟ ಬಾಲಕನೊಬ್ಬ ಬೇಕಿತ್ತು. ಆಗ ಬಾಲಕಿ ಲಕ್ಷ್ಮೀಬಾಯಿಗೆ ಮೇಕಪ್ ಮಾಡಿ ಪೋಷಕರು ತೊಡಿಸಿ ರಂಗದ ಮೇಲೆ ಕಳಿಸಿದಾಗ ಪುಟ್ಟ ಬಾಲೆ ಎದೆಗುಂದದೆ ಹೇಳಿಕೊಟ್ಟ ಮಾತುಗಳನ್ನು ಪ್ರೇಕ್ಷಕರೆದರು ಒಪ್ಪಿಸಿದಳು. ಅವಳ ನಡೆ–ನುಡಿ ಕಂಪೆನಿಯ ಕಲಾವಿದರಿಗೂ ಇಷ್ಟವಾಯಿತು. ಆ ಮೇಲೆ ಲಕ್ಷ್ಮೀಬಾಯಿ ಮತ್ತು ರಂಗಭೂಮಿಯ ನಂಟು ಬೆಳೆಯುತ್ತಾ ಹೋಯಿತು.

ರಂಗಭೂಮಿಯೊಂದಿಗೆ ಕರುಳಬಳ್ಳಿ ಸಂಬಂಧ ಇಟ್ಟುಕೊಂಡ ಲಕ್ಷ್ಮೀಬಾಯಿ ಮೊದಲಿಗೆ ಯಾವುದನ್ನೂ ಕಲಿಯದೇ ಬಣ್ಣ ಹಚ್ಚಿದ ಬಳಿಕ ಎಲ್ಲದರಲ್ಲಿ ಪರಿಣತಿ ಸಾಧಿಸಿದರು. ಬಾಲಕಿಯಾಗಿದ್ದಾಗಲೇ ನಟನೆಯ ಪಾಠಗಳನ್ನು ಅಭ್ಯಾಸ ಮಾಡಿ ಬಹುಬೇಗ ನುರಿತ ನಟಿ ಎನ್ನಿಸಿಕೊಂಡರು. ಅವರ ತಂದೆ ವಿರೂಪಾಕ್ಷಪ್ಪನವರು ನಾಟಕ ಕಂಪೆನಿ ಬದಲಿಸಿದಾಗ ಲಕ್ಷ್ಮೀಬಾಯಿ ಅನಿವಾರ್ಯವಾಗಿ ಅವರೊಂದಿಗೆ ಹೋಗುತ್ತಿದ್ದರು. ಕೊನೆಗೆ ಅವರು ಸೇರ್ಪಡೆಯಾಗಿದ್ದು ಏಣಗಿ ಬಾಳಪ್ಪನವರ ಕಂಪೆನಿಗೆ. ಬಾಳಪ್ಪನವರ 'ಕಲಾ ವೈಭವ ನಾಟ್ಯ ಸಂಘ' ಬೆಳಗಾವಿ ಸಮೀಪದ ಬೈಲಹೊಂಗಲದಲ್ಲಿ ಮೊಕ್ಕಾಂ ಹೂಡಿದ್ದ ಸಂದರ್ಭ ಅದು. ಹೆಂಡತಿ ಮಕ್ಕಳೊಂದಿಗೆ ಅಲ್ಲಿಗೆ ವಿರೂಪಾಕ್ಷಪ್ಪ ಕಾಲಿಟ್ಟರು. ಆ ವೇಳೆಗಾಗಲೇ ಸಣ್ಣಪುಟ್ಟ ಪಾತ್ರಗಳ ನಿರ್ವಹಿಸಿದ್ದ ಲಕ್ಷ್ಮೀಬಾಯಿ ಅವರಿಗೆ ಕಂಪೆನಿ ಮಾಲೀಕ ಬಾಳಪ್ಪನವರೇ ಮಾರ್ಗದರ್ಶನ ಮಾಡಿ ಪಾತ್ರ ಮಾಡಿಸಲಾರಂಭಿಸಿದರು.